MAY 2022 **U/ID 30705/ULC3A**

Time : Three hours Maximum : 75 marks

SECTION A — (10 × 2 = 20 marks)

I. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 50 ಪದಗಳು.

1. ಕನ್ನಡದಲ್ಲಿ ಕಾದಂಬರಿಗಳ ಉಗಮ ಹೇಗಾಯಿತು?

2. ಕನ್ನಡದ ಮೊದಲ ಕಾದಂಬರಿ ಯಾವುದು? ಅದನ್ನು ರಚಿಸಿದವರು ಯಾರು?

3. 'ಅಳಿದ ಮೇಲೆ' ಕಾದಂಬರಿಯ ಕರ್ತೃವಿನ ಪರಿಚಯ.

4. 'ಅಳಿದ ಮೇಲೆ' ಕಾದಂಬರಿಯ ಪ್ರಾದೇಶಿಕತೆ.

5. ನಿರೂಪಕರಿಗೆ ಬಂದ ಪತ್ರ

6. ಜಲಜಳ ವ್ಯಕ್ತಿತ್ವ

7. ಯಶವಂತರಾಯರ ಚಿತ್ರಕಲೆಯ ಹವ್ಯಾಸ.

8. ದಾದಾನ ಮೋಸ.

9. ಯಶವಂತರಾಯರ ಬಾಲ್ಯ ಜೀವನ

10. ಮೇರಿಯ ಪಾತ್ರವನ್ನು ಪರಿಚಯಿಸಿ.

11. ವಿಷ್ಣುಪಂಥ ಘಾಟಿಯವರ ಪುಸ್ತಕ ರಚನೆ

12. ಜೆಮ್‌ಷೆಡ್ಜಿ.

SECTION B — (5 × 5 = 25 marks)

II. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭದೊಂದಿಗೆ ಮತ್ತು ಯಾರು ಯಾರಿಗೆ ಹೇಳಿದರು ಎಂದು ಉತ್ತರಿಸಿ. ಉತ್ತರದ ಮಿತಿ 200 ಪದಗಳು.

13. ಧಾರೇಶ್ವರದ ಸೀನನ ಗುಣಸ್ವಭಾವ.

14. ನಿರೂಪಕರು ಮೊದಲ ಬಾರಿಗೆ ಯಶವಂತರಾಯರನ್ನು ಎಲ್ಲಿ, ಹೇಗೆ ಭೇಟಿಯಾದರು?

15. ಪಾರ್ವತಜ್ಜಿಯು, ನಿರೂಪಕರ ಬಳಿ ಏನು ಕೇಳಿದಳು ಮತ್ತು ಅದು ಹೇಗೆ ನೆರವೇರಿತು?

16. ಸೀತಾರಾಮು ಮತ್ತು ನಿರೂಪಕರ ನಡುವಿನ ವ್ಯವಹಾರ.

17. ಇಂದುಮತಿ ತನ್ನ ತಾಯಿಯ ಬಗ್ಗೆ ನಿರೂಪಕರಿಗೆ ತಿಳಿಸುವ ವಿಚಾರಗಳು.

18. ಶಂಬುಹೆಗ್ಗಡೆ ಪಾರ್ವತಮ್ಮನನ್ನು ಹೇಗೆ ಮತ್ತು ಏಕೆ ವಂಚಿಸುತ್ತಿದ್ದನು?

19. ಮುರ್ಡೇಶ್ವರದ ವಕೀಲನ ಪಾತ್ರವನ್ನು ಪರಿಚಯಿಸಿ.

SECTION C — (3 × 10 = 30 marks)

III. ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. ಉತ್ತರದ ಮಿತಿ 500 ಪದಗಳು.

20. ಮೂಕಾಂಬಿಕೆಯ ಪಾತ್ರವನ್ನು ಪರಿಚಯಿಸಿ.

21. ಬದುಕಿನಲ್ಲಿ ನಾವು ಪಡೆದುಕೊಂಡದ್ದಕ್ಕಿಂತ ತಿರುಗಿ ಕೊಟ್ಟದ್ದು ಎಷ್ಟು ಎಂಬುದರ ಕಾಳಜಿಯೇ 'ಅಳಿದ ಮೇಲೆ' ಕಾದಂಬರಿಯ ಪ್ರಧಾನ ಆಶಯವಾಗಿದೆ. ಚರ್ಚಿಸಿ.

22. ಯಶವಂತರ ಜೀವನದಲ್ಲಿ ಕಾಣಿಸಿಕೊಂಡ ಇಬ್ಬರು ಹೆಂಗಸರು ಅವರ ಜೀವನದ ಮೇಲೆ ಬೀರಿದ ಪ್ರಭಾವವೇನು?

23. 'ಅಳಿದ ಮೇಲೆ' ಕಾದಂಬರಿಯಲ್ಲಿ ಬರುವ ನಿರೂಪಕನ ಪಾತ್ರವನ್ನು ಪರಿಚಯಿಸಿ.

24. 'ಮನುಷ್ಯ ಜೀವನದ ಸಾರ್ಥಕ್ಯವಿರುವುದು ಸಮಾಜದ ಋಣವನ್ನು ತೀರಿಸುವುದರಲ್ಲಿ' – ಈ ಹೇಳಿಕೆ 'ಅಳಿದ ಮೇಲೆ' ಕಾದಂಬರಿಯಲ್ಲಿ ಹೇಗೆ ನಿರೂಪಿತವಾಗಿದೆ.
